PW-8
CW-17

**ಪ್ರಧಾನ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರವರ ನ್ಯಾಯಾಲಯ, ದಾವಣಗೆರೆ.**

**SC No.63/2025**

| | | |
|---|---|---|
| ಸಾಕ್ಷಿದಾರರ ಹೆಸರು | : | ಬಸವರಾಜ ಎಂ |
| ತಂದೆಯ/ಗಂಡನ ಹೆಸರು | : | ಮುದ್ದನಪ್ಪ |
| ವಯಸ್ಸು | : | 40 ವರ್ಷ |
| ಉದ್ಯೋಗ | : | Police constable CPC 427, Jagaluru Police Station |
| ವಾಸ ಸ್ಥಳ | : | Jagaluru |

ಪಿ.ಡಬ್ಲ್ಯೂ 8

ಸಿ.ಡಬ್ಲ್ಯೂ 17

ದಿ: 12-08-2026 ರಂದು ಸಾಕ್ಷಿಯನ್ನು ಕರೆಸಿ ಪ್ರಮಾಣ ವಚನ ಬೋಧಿಸಲಾಯಿತು.

**ಮುಖ್ಯ ವಿಚಾರಣೆಃ ಮಾನ್ಯ ಸರ್ಕಾರಿ ಅಭಿಯೋಜಕರಿಂದ**

1. ನಾನು ಎರಡೂಕಾಲು ವರ್ಷಗಳಿಂದ ಸಿ ಪಿಸಿ ಆಗಿ ಕರ್ತವ್ಯವನ್ನು ನಿರ್ವಹಿಸಿರುತ್ತೇನೆ. ದಿನಾಂಕಃ 11-03-2025 ರಂದು ನಮ್ಮ ಠಾಣೆಯ ತನಿಖಾದಿಕಾರಿಯಾದ ಚಾಸಾ-19 ರವರು ನನಗೆ ಮತ್ತು ಚಾಸಾ- 18 ರವರಿಗೆ 2 ನೇ ಆರೋಪಿಯನ್ನು ಪತ್ತೆ ಹಚ್ಚಲು ನೇಮೀಸಿದರು. ಅದರಂತೆ ನಾವು ಚಾಸಾ-19 ರವರಿಂದ ಪಾಸ್ ಪೋರ್ಟನ್ನು ಪಡೆದು 2 ನೇ ಆರೋಪಿಯನ್ನು ಪತ್ತೆ ಹಚ್ಚಲು ಮೈಸೂರಿನ ಹಿನಕಲ್ ಗೆ ಹೊರಟಿದ್ದೆವು. ದಿನಾಂಕಃ 13-03-2025 ರಂದು ಮೈಸೂರಿನ ವಿಜಯನಗರ ಪೋಲೀಸ್ ಠಾಣೆ ಯ ಅಧಿಕಾರಿವರ ಸಹಾಯದಿಂದ 2 ನೇ ಆರೋಪಿಯನ್ನು ಬೆಳಿಗ್ಗೆ 10-00 ಗಂಟೆಗೆ ಪತ್ತೆ ಮಾಡಿಕೊಂಡು ಅದೇ ದಿನ ಅವರನ್ನು ಜಗಳೂರಿಗೆ ಕರೆದುಕೊಂಡು ಬಂದೆವು. ಜಗಳೂರಿಗೆ ತಲುಪಿದಾಗ ಸಂಜೆ 5-00 ಆಗಿತ್ತು. ಚಾಸಾ-19 ರವರನ್ನು 2 ನೇ ಆರೋಪಿಯನ್ನು ವರದಿಯೊಂದಿಗೆ ಒಪ್ಪಿಸಿದೆನು. ಸದರಿ ಪಾಸ್ ಪೋರ್ಟನ್ನು ಈಗ ನೋಡುತ್ತಿದು ನಿ.ಪಿ.- 13 ಎಂದು ಗುರುತಿಸಲಾಯಿತು. ವರದಿಯನ್ನು

<u>PW-8</u>
CW-17

ನಿ.ಪಿ.- 14 ಎಂದು ಸಾಕ್ಷಿ ಸಹಿಯನ್ನು ನಿ.ಪಿ.- 14(ಎ) ಎಂದು ಗುರುತಿಸಲಾಯಿತು.. 2 ನೇ ಆರೋಪಿ ಈ ದಿನ ನ್ಯಾಯಾಲಯದ ಮುಂದೆ ಇದ್ದು ಅವರನ್ನು ಗುರುತಿಸುತ್ತೇನೆ.

**<u>ಪಾಟೀ ಸವಾಲುಃ ಶ್ರೀ .CTS, ವಕೀಲರಿಂದ 1</u> <u>ಆರೋಪಿತರ ಪರವಾಗಿ</u>**: ಏನೂ ಇಲ್ಲ.

**<u>ಪಾಟೀ ಸವಾಲುಃ ಶ್ರೀ .PKB , ವಕೀಲರಿಂದ 2</u> <u>ಆರೋಪಿತರ ಪರವಾಗಿ</u>**:

2. 2 ನೇ ಆರೋಪಿ ಬಂದಿಸಿದ ಬಗ್ಗೆ ಅವರ ತಮ್ಮನಿಗೆ ತಿಳಿಸಿರುತ್ತೇನೆ. ಅವರ ತಮ್ಮನ ಹೆಸರು ನೆನಪಿಲ್ಲ. ತಮ್ಮನಿಗೆ ತಿಳಿಸಿದ ಬಗ್ಗೆ ದಾಖಲೆ ಇರುವುದಿಲ್ಲ. ಯಾವ ಕಾರಣಕ್ಕೆ ಬಂಧನ ಮಾಡಲಾಗಿದೆ ಎಂದು ಠಾಣಾ ಡೈರಿಯಲ್ಲಿ ನಮೂದು ಆಗಿಲ್ಲ. ಠಾಣಾ ಡೈರಿಯನ್ನು ನ್ಯಾಯಾಲಯಕ್ಕೆ ಹಾಜರುಪಡಿಸಲು ತೊಂದರೆ ಇಲ್ಲ. 2 ನೇ ಆರೋಪಿಯನ್ನು ಸೆಕ್ಷನ್ 108(3)/5 ರ ಅಡಿಯಲ್ಲಿ ದಸ್ತಗಿರಿ ಮಾಡಲಾಗಿದೆ ಎಂದು ತಿಳಿಸಿದೆವು. ಯಾವ ಕಾರಣಕ್ಕೆ 2 ನೇ ಆರೋಪಿಯನ್ನು ದಸ್ತಗಿರಿ ಮಾಡಲಾಗಿದೆ ಎಂದು ತಿಳಿಸಲಾಗಿದೆ. ನೇಣು ಹಾಕಿಕೊಂಡು ತೀರಿಕೊಂಡಿದ್ದ ಕೇಸಿನಲ್ಲಿ 2 ನೇ ಆರೋಪಿ ಯನ್ನು ದಸ್ತಗಿರಿ ಮಾಡಬೇಕು ಎಂದು ಠಾಣಾದಿಕಾರಿಗಳು ನಮಗೆ ಹೇಳಿದರು. ಲಿಖಿತವಾಗಿ ನಮಗೆ ಠಾಣಾದಿಕಾರಿಗಳು ನಮಗೆ ತಿಳಿಸಿದರು. ಸದರಿ ಲಿಖಿತ ದಾಖಲೆ ಅಂದರೆ ಪಾಸ್ ಪೋರ್ಟ್ ಮತ್ತು ಮೆಮೋ ಕೊಟ್ಟಿದ್ದರು. 2 ನೇ ಆರೋಪಿಯೇ ಠಾಣೆಗೆ ಸಂರಂಡರ್ ಆಗಿರುತ್ತಾರೆ ನಾವು ಅವರನ್ನು ಬಂದಿಸಿರುವುದಿಲ್ಲ ಎಂದರೆ ಸರಿಯಲ್ಲ.

**<u>ಮರುವಿಚಾರಣೆಃ</u>** ಇಲ್ಲ.

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯ ಹೇಳಿಕೆಯಂತೆ ನನ್ನ ಉಕ್ತ ಲೇಖನಕ್ಕೆ ಬೆರಳಚ್ಚು ಮಾಡಲಾಯಿತು.)

ಓದಿ, ಹೇಳಿ, ಕೇಳಿ, ಸರಿ ಇದೆ.

(ವೇಲಾ .ಡಿ.ಕೆ)
ಪ್ರಧಾನ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು,
ದಾವಣಗೆರೆ.